# ಪ್ರಹಸನ ಪ್ರಸಂಗ

❄ ಕುಡುಕನೊಬ್ಬ ಚೆನ್ನಾಗಿ ಕುಡಿದು ಮನೆಗೆ ಹಿಂತಿರುಗಿದನು. ಅವನ ಮಗಳು ಚಿಕ್ಕ ಹುಡುಗಿ, ಮಲಗಿ ನಿದ್ರಿಸುತ್ತಿದ್ದಳು. ಇವನ ಜ್ಞಾನಚಕ್ಷುವಿಗೆ ಆಕೆ ಸತ್ತಿರುವಳೆಂದು ಗೋಚರಿಸಿತು! ಅವಳನ್ನು ಹೆಗಲಮೇಲೆ ಹಾಕಿಕೊಂಡು, ಗುದ್ದಲಿಯನ್ನು ಹಿಡಿದುಕೊಂಡು ಸ್ಮಶಾನದ ಕಡೆ ಹೊರಟ.

ದಾರಿಯಲ್ಲಿ ಯಾರೋ ವಿಚಾರಿಸಿದರು, 'ಎಲ್ಲಿಗೆ ಹೋಗುತ್ತಿರುವೆ?' ಎಂದು. 'ಸ್ಮಶಾನಕ್ಕೆ, ಈ ಮಗುವನ್ನು ಹೂಳಲು'ಎಂದು ಉತ್ತರಿಸಿದ. 'ಅರೆ, ಮಗು ನಗುತ್ತ ಇದೆಯಲ್ಲಯ್ಯ! ಅದೆಲ್ಲಿ ಸತ್ತಿದೆ?' ಎಂದು ಆತ ಆಶ್ಚರ್ಯದಿಂದ ಕೇಳಿದ, 'ಇಲ್ಲ, ಅದಿನ್ನೂ ಮಗು, ಅದಕ್ಕೇನೂ ತಿಳಿಯದು' ಎಂದನು ಆ ಕುಡುಕ.

ಹೀಗೆಯೇ ನಮ್ಮ ಅಹಂಕಾರದ ಅಮಲಿನ ಸ್ಥಿತಿಯಲ್ಲಿ ನಮ್ಮ ಭ್ರಮೆಯು ಅರಿವಾಗದೆ, ಇತರರು ಭ್ರಮೆಯಲ್ಲಿರುವರೆಂದು ಭಾವಿಸುತ್ತೇವೆ. ನಾವೇ ಸರಿ, ಇತರರೆಲ್ಲ ತಪ್ಪು ಎಂದು ಭಾವಿಸುತ್ತೇವೆ. ನಮ್ಮ ತಪ್ಪಿನ ಅರಿವು ನಮಗುಂಟಾಗುವುದೇ ಇಲ್ಲ.

❄ ವಸ್ತುವಿನ ಸ್ವರೂಪ ಜನರ ಅಭಿಮತವನ್ನಾಗಲಿ, ತಾರ್ಕಿಕ ಪ್ರಮಾಣವನ್ನಾಗಲಿ ಅವಲಂಬಿಸಿರುವುದಿಲ್ಲ. ಅದು ತಾನೇ ತಾನಾಗಿರುತ್ತದೆ. ನಮ್ಮ ಅಭಿಪ್ರಾಯ ಅದನ್ನು ಬದಲಾಯಿಸುವುದಿಲ್ಲ. ಹಾಗೆಯೇ ಒಬ್ಬನು ಅಪರಾಧಿಯೊ, ನಿರಪರಾಧಿಯೊ ಎಂದು ಕೋರ್ಟಿನಲ್ಲಿ ತೀರ್ಮಾನವಾದ ಮಾತ್ರಕ್ಕೆ ಅವನು ಅಪರಾಧಿಯೊ ನಿರಪರಾಧಿಯೊ ಆಗುವುದಿಲ್ಲ. ಪ್ರತಿಯೊಬ್ಬರೂ ತಮ್ಮನ್ನು ತಾವೇ ಅಳೆಯಬೇಕು, ಇತರರ ಅಭಿಪ್ರಾಯವನ್ನು ಅವಲಂಬಿಸಬಾರದು.

ಒಬ್ಬ ವ್ಯಕ್ತಿ ಕಳ್ಳತನದ ಆಪಾದನೆಗೆ ಒಳಗಾದನು. ಅವನನ್ನು ವಿಚಾರಣೆಗೆ ಒಳಪಡಿಸಲಾಯಿತು. ಕೋರ್ಟಿನಲ್ಲಿ ಅವನ ಪರ ಮತ್ತು ವಿರೋಧವಾಗಿ ವಾದ-ವಿವಾದ ನಡೆಯಿತು. ಕೊನೆಯಲ್ಲಿ ನ್ಯಾಧೀಶರು ತಮ್ಮ ತೀರ್ಪನ್ನು ನೀಡಿದರು. ಆ ವ್ಯಕ್ತಿ ನಿರಪರಾಧಿ ಎಂದು ಅವರು ತೀರ್ಪು ನೀಡಿದ್ದರು. ಅವನಿಗೆ ಈ ವಿಷಯವನ್ನು ತಿಳಿಸಿದಾಗ ಅವನು ಕೇಳಿದ:

'ನಾನು ಕದ್ದ ಮಾಲನ್ನು ಏನು ಮಾಡಲಿ?'

❄ ಯಾವ ದಡ್ಡನೂ ತನ್ನ ದಡ್ಡತನವನ್ನು ಒಪ್ಪಿಕೊಳ್ಳಲು ಇಷ್ಟಪಡುವುದಿಲ್ಲ, ತಾನು ಬುದ್ಧಿವಂತ ಎಂದೇ ಭಾವಿಸುತ್ತಾನೆ. ಅವನ ದಡ್ಡತನವನ್ನು ಎತ್ತಿ ತೋರಿಸುವುದೂ ಸೂಕ್ತವಲ್ಲ. ಹಾಗೆ ಮಾಡಲು ಹೋದಾಗ ನಾವೇ ದಡ್ಡರಾಗುವ ಸಂಭವವುಂಟಾಗಬಹುದು.

ಉಪಾಧ್ಯಾಯರೊಬ್ಬರು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ವರ್ಗವಾಗಿದ್ದರು. ಅವರು ಒಂದು ತರಗತಿಗೆ ಹೊದರು. ಅವರಿಗೆ ವಿದ್ಯಾರ್ಥಿಗಳೆಲ್ಲ ಹೊಸಬರು. ಮೊದಲು ತಮ್ಮನ್ನು ಪರಿಚಯ ಮಾಡಿಕೊಂಡು, ಅನಂತರ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಹೇಳಿದರು : 'ಪ್ರಿಯ ವಿದ್ಯಾರ್ಥಿಗಳೇ, ನೀವೆಲ್ಲ ನನಗೆ ಹೊಸಬರು. ನಿಮ್ಮಲ್ಲಿ ದಡ್ಡರು ಎಷ್ಟು ಜನ ಇದ್ದಾರೆ ಎಂದು ಗೊತ್ತಾದರೆ ನನಗೆ ಪಾಠ ಮಾಡಲು ಅನುಕೂಲವಾಗುತ್ತದೆ. ಆದ್ದರಿಂದ ನಿಮ್ಮಲ್ಲಿ ಯಾರಾರು ದಡ್ಡರೊ ಅವರೆಲ್ಲ ಎದ್ದು ನಿಲ್ಲಿ.'

ಯಾರೂ ಏಳಲೇ ಇಲ್ಲ. ಸ್ವಲ್ಪ ಹೊತ್ತಿನ ನಂತರ ಒಬ್ಬ ವಿದ್ಯಾರ್ಥಿ ಎದ್ದು ನಿಂತನು.

'ಹೊ, ನೀನು ದಡ್ಡನೇನು? ಹಾಗಾದರೆ ನಾನು ನಿನಗೆ ಸ್ಪೆಶಲ್ಲಾಗಿ ಪಾಠ ಹೇಳಬೇಕು,' ಎಂದರು ಉಪಾಧ್ಯಾಯರು.

'ಇಲ್ಲ ಸಾರ್, ನೀವೊಬ್ಬರೆ ನಿಂತಿದ್ದರೆ ಚೆನ್ನಾಗಿರುವುದಿಲ್ಲ ಎಂದು ನಾನೂ ನಿಂತುಬಿಟ್ಟೆ.'


## ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಆಗಸ್ಟ್

| | | |
|---|---|---|
| 15 | ಮಂಗಳವಾರ | ಸ್ವಾಮಿ ನಿರಂಜನಾನಂದ ಜಯಂತಿ |
| 23 | ಬುಧವಾರ | ಶ್ರೀಕೃಷ್ಣ ಜನ್ಮಾಷ್ಟಮಿ |
| 28 | ಸೋಮವಾರ | ಸ್ವಾಮಿ ಅದ್ವೈತಾನಂದ ಜಯಂತಿ |

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ.